ದೂರವಾಣಿ: 6361532058
E-mail: regexamku@gmail.com

# ಕುವೆಂಪು ವಿಶ್ವವಿದ್ಯಾಲಯ

ಸಂಖ್ಯೆ:ಕುವಿ/ಪವಿ/ಯು.ಜಿ-2/2020-21/ 8616

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ
ಜ್ಞಾನಸಹ್ಯಾದ್ರಿ, ಶಂಕರಘಟ್ಟ-577451
ದಿನಾಂಕ: 11/02/2021.

## ಪ್ರಕಟಣೆ

ವಿಷಯ : ಮಾರ್ಚಿ-2021ರಲ್ಲಿ ನಡೆಯುವ ಬಿ.ಎ / ಬಿ.ಎಸ್ಸಿ / ಬಿ.ಕಾಂ /ಬಿ.ಬಿ.ಎ/ ಬಿ.ಟಿ.ಎ/ಬಿ.ಸಿ.ಎ / ಬಿ.ಎಸ್.ಡಬ್ಲ್ಯೂ /ಬಿ.ಎಸ್ಸಿ (ಆನರ್ಸ್) ಪದವಿ ಪರೀಕ್ಷೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಕುರಿತು.

*****

ಬಿ.ಎ / ಬಿ.ಎಸ್ಸಿ / ಬಿ.ಕಾಂ / ಬಿ.ಬಿ.ಎ/ಬಿ.ಟಿ.ಎ/ಬಿ.ಸಿ.ಎ/ಬಿ.ಎಸ್.ಡಬ್ಲ್ಯೂ/ಬಿ.ಎಸ್ಸಿ (ಆನರ್ಸ್) ಪದವಿಗಳ ಲಿಖಿತ/ಪ್ರಾಯೋಗಿಕ ಪರೀಕ್ಷೆಗಳು ಈ ಕೆಳಕಂಡ ದಿನಾಂಕಗಳಂದು ಪ್ರಾರಂಭವಾಗುತ್ತವೆ.

| ಪ್ರಾಯೋಗಿಕ / ಲಿಖಿತ ಪರೀಕ್ಷೆಗಳು ಪ್ರಾರಂಭವಾಗುವ ದಿನಾಂಕಗಳ ವಿವರ. |
|---|
| 1. ಪ್ರಾಯೋಗಿಕ ಪರೀಕ್ಷೆಗಳು(ರೆಗ್ಯುಲರ್/ರಿಪೀಟರ್ ವಿದ್ಯಾರ್ಥಿಗಳಿಗೆ) ಲಿಖಿತ ಪರೀಕ್ಷೆಗಳ ನಂತರ ನಡೆಸಲಾಗುವುದು. |
| 2. ಲಿಖಿತ ಪರೀಕ್ಷೆಗಳು ದಿನಾಂಕ: 22-03-2021 ರಿಂದ ಪ್ರಾರಂಭವಾಗುತ್ತವೆ. |

ಪರೀಕ್ಷೆ ತೆಗೆದುಕೊಳ್ಳಲು ನಿಯಮಾನುಸಾರ ಅರ್ಹರಾದ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ತಮ್ಮ ಅರ್ಜಿ/ ಪರೀಕ್ಷಾ ಶುಲ್ಕವನ್ನು ಪಾವತಿಸಿ ನಂತರ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರ ಮೂಲಕ ಕುಲಸಚಿವ (ಪರೀಕ್ಷಾಂಗ) ಇವರಿಗೆ ಸಲ್ಲಿಸಲು ತಿಳಿಸಲಾಗಿದೆ.

**ಕಡ್ಡಾಯವಾಗಿ ಆನ್‌ಲೈನ್‌ನಲ್ಲಿಯೇ ಅರ್ಜಿ ಸಲ್ಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆ 6361532058/7022254997 ಸಂಪರ್ಕಿಸುವುದು.** (ಕೊನೆಯ ದಿನಾಂಕದವರೆಗೆ ಅರ್ಜಿ ಸಲ್ಲಿಸಲು ಕಾಯದೇ ಮುಂಚಿತವಾಗಿಯೇ ಆನ್‌ಲೈನ್‌ನಲ್ಲಿ ಸಲ್ಲಿಸುವುದರಿಂದ ಅಂತ್ಯದಲ್ಲಿ ಉಂಟಾಗುವ ಸರ್ವರ್ ದಟ್ಟಣೆಯ ಅಡಚಣೆ ತಪ್ಪಿಸಬಹುದಾಗಿದೆ.)

| ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ದಿನಾಂಕಗಳು: | | |
|---|---|---|
| 1 | ದಂಡ ಶುಲ್ಕವಿಲ್ಲದೆ | 25-02-2021 ರವರೆಗೆ |
| 2 | ದಂಡ ಶುಲ್ಕ ರೂ. 100=00ರಂತೆ (ಪ್ರತಿ ಸೆಮಿಸ್ಟರ್‌ಗೆ) | 26-02-2021 ರಿಂದ 28-02-2021 ರವರೆಗೆ |
| 3 | ದಂಡ ಶುಲ್ಕ ರೂ. 500=00ರಂತೆ (ಪ್ರತಿ ಸೆಮಿಸ್ಟರ್‌ಗೆ) | 01-03-2021 ಮತ್ತು 03-03-2021 ರವರೆಗೆ |

| | B.A /B.Sc /B.Com | | BCA / BBA/ BTA / BSW | |
|---|---|---|---|---|
| 1 | ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ | ರೂ. 520/- | ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ | ರೂ. 880/- |
| 2 | ಪ್ರತಿ ಪತ್ರಿಕೆಗೆ ಥಿಯರಿ ಪರೀಕ್ಷೆ ಪ್ರತ್ಯೇಕವಾಗಿ (ಪ್ರತಿ ಸೆಮಿಸ್ಟರ್ ಎಲ್ಲಾ ಪತ್ರಿಕೆಗಳಿಗೆ ರೂ.520/-ಕ್ಕೆ ಒಳಪಟ್ಟು) | ರೂ. 165/- | ಪ್ರತಿ ಪತ್ರಿಕೆಗೆ ಥಿಯರಿ ಪರೀಕ್ಷೆ ಪ್ರತ್ಯೇಕವಾಗಿ (ಪ್ರತಿ ಸೆಮಿಸ್ಟರ್ ಎಲ್ಲಾ ಪತ್ರಿಕೆಗಳಿಗೆ ರೂ.880/-ಕ್ಕೆ ಒಳಪಟ್ಟು) | ರೂ. 200/- |
| 3 | ಪ್ರಾಯೋಗಿಕ ಪರೀಕ್ಷೆಗೆ ಪ್ರತಿ ಪತ್ರಿಕೆಗೆ | ರೂ. 110/- | ಪ್ರಾಯೋಗಿಕ ಪರೀಕ್ಷೆಗೆ ಪ್ರತಿ ಪತ್ರಿಕೆಗೆ | ರೂ. 110/- |
| 4 | ಅಂಕಪಟ್ಟಿ ಶುಲ್ಕ (ಪ್ರತಿ ಸೆಮಿಸ್ಟರ್‌ಗೆ) | ರೂ. 200/- | ಅಂಕಪಟ್ಟಿ ಶುಲ್ಕ (ಪ್ರತಿ ಸೆಮಿಸ್ಟರ್‌ಗೆ) | ರೂ. 200/- |
| 5 | ಕಿರುಪರೀಕ್ಷೆಯ ಪುಸ್ತಕ ಶುಲ್ಕ ಎಲ್ಲಾ ಸ್ನಾತಕ ಪದವಿಗಳಿಗೆ (ಪ್ರತಿ ವಿದ್ಯಾರ್ಥಿಗೆ) | | I & II Sem | ರೂ. 65/- |
| | | | III & IV Sem | ರೂ. 70/- |
| | | | V & VI Sem | ರೂ. 75/- |

| ಬಿ.ಎಸ್ಸಿ (ಆನರ್ಸ್) ಪದವಿಯ ಪರೀಕ್ಷಾ ಶುಲ್ಕದ ವಿವರ (ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ) | | | | |
|---|---|---|---|---|
| | ವಿವರ | ಪರೀಕ್ಷಾ ಶುಲ್ಕ | ಅಂಕಪಟ್ಟಿ ಶುಲ್ಕ | ಒಟ್ಟು ಶುಲ್ಕ |
| 01 | ಪ್ರತಿ ಸೆಮಿಸ್ಟರ್ ಪೂರ್ಣ ಪರೀಕ್ಷೆಗೆ | ರೂ. 1575/- | ರೂ.200/- | ರೂ.1775/- |

......2

| | | | | |
|---|---|---|---|---|
| 02 | ಸೆಮಿಸ್ಟರ್‌ನ ಪ್ರತಿ ಥಿಯರಿ ಪತ್ರಿಕೆಗೆ, | ರೂ. 350/- | ರೂ.200/- | ರೂ. 550/- |
| 03 | ಸೆಮಿಸ್ಟರ್‌ನ ಒಂದು ಪ್ರಾಯೋಗಿಕ ಪರೀಕ್ಷೆಗೆ | ರೂ. 350/- | ರೂ.200/- | ರೂ. 550/- |

## ವಿದ್ಯಾರ್ಥಿಗಳಿಗೆ ಸೂಚನೆ:

1. ವಿದ್ಯಾರ್ಥಿಗಳು online ಮುಖಾಂತರ ಅರ್ಜಿ ಸಲ್ಲಿಸಲು www.kuvempu.ac.in ನಲ್ಲಿ studentportal ಗೆ login ಆಗಿ ಪರೀಕ್ಷೆ ತೆಗೆದುಕೊಳ್ಳುವ ಸೆಮಿಸ್ಟರ್‌ವಾರು/ವಿಷಯವಾರು ಗುರುತು ಮಾಡಿ ಪರೀಕ್ಷಾ ಅರ್ಜಿಯನ್ನು ಸಲ್ಲಿಸಬೇಕು.
2. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕವನ್ನು ಯಾವುದೇ ATM (Debit) Card / Credit Card / Net Banking / Paytm wallet ಮೂಲಕ ನೇರವಾಗಿ ವಿದ್ಯಾರ್ಥಿಯು ವೈಯಕ್ತಿಕ ಅಥವಾ ಪೋಷಕರ ಬ್ಯಾಂಕ್ ಖಾತೆಯಿಂದ ಹಣ ಪಾವತಿಸಬಹುದಾಗಿದೆ. ಹಣ ಪಾವತಿಸಿ ಸಂಬಂಧಿಸಿದ ಚಲನ್ ಪ್ರತಿ ಮತ್ತು ದಾಖಲಾತಿಗಳನ್ನು ಕಾಲೇಜಿಗೆ ಸಲ್ಲಿಸಬೇಕು. ನಿಗದಿಪಡಿಸಿದ ದಿನಾಂಕದ ನಂತರ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

**ವಿಶೇಷ ಸೂಚನೆ:ವಿದ್ಯಾರ್ಥಿಗಳು Internet Browsing centreನ ಮಾಲಿಕರ ಬ್ಯಾಂಕ್‌ಖಾತೆಯ ಮೂಲಕ ವಿಶ್ವವಿದ್ಯಾಲಯಕ್ಕೆ ಹಣ ಪಾವತಿಸಿದಲ್ಲಿ ಉಂಟಾಗುವ ತಾಂತ್ರಿಕ ತೊಂದರೆಗಳಿಗೆ ವಿದ್ಯಾರ್ಥಿಗಳೇ ಜವಾಬ್ದಾರರು ಅಂತರ್‌ಜಾಲದಲ್ಲಿ ಪಾವತಿಸುವಾಗ ಬ್ಯಾಂಕ್‌ನ ಅಥವಾ ಇತರೆ ತಾಂತ್ರಿಕ ಕಾರಣಗಳಿಂದ ಪಾವತಿಯಾದ ಮೊತ್ತಕ್ಕೆ ಖಚಿತತೆ ಸೂಚನೆ ಬರುವುದು ಕನಿಷ್ಠ 15 ನಿಮಿಷ ಆಗಬಹುದಾಗಿದೆ. ಈ ಹಿನ್ನೆಲೆಯಲ್ಲಿ ತಕ್ಷಣವೇ ಮತ್ತೊಮ್ಮೆ ಪಾವತಿಸದೇ ಇರಲು ಸೂಚಿಸಿದೆ. ಒಂದೊಮ್ಮೆ ಒಂದಕ್ಕಿಂತ ಹೆಚ್ಚು ಬಾರಿ ಪಾವತಿಸಿದಲ್ಲಿ 'ಪರೀಕ್ಷಾ ಮಿತ್ರ' Linkನಲ್ಲಿ ಲಭ್ಯವಿರುವ Refund Formನ್ನು ಪಡೆದು ಭರ್ತಿ ಮಾಡಿ ಸೂಕ್ತ ದಾಖಲೆಗಳೊಂದಿಗೆ ಕುಲಸಚಿವರು(ಪ) ಇವರಿಗೆ ಸಲ್ಲಿಸುವುದು. ಮರುಪಾವತಿಗೆ ಕನಿಷ್ಠ ಒಂದು ತಿಂಗಳ ಕಾಲಾವಧಿ ಬೇಕಾಗುತ್ತದೆ.**

ಅ. ರೂ. 2.5 ಲಕ್ಷ ಅಥವಾ ಇದಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯವನ್ನು ಹೊಂದಿರುವ ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದ Freshers ವಿದ್ಯಾರ್ಥಿಗಳಿಗೆ ಮಾತ್ರ ನಿಯಮಾನುಸಾರ ಶುಲ್ಕ ವಿನಾಯಿತಿ ಇರುತ್ತದೆ. ಆದರೆ ಅಂತಹ ಅಭ್ಯರ್ಥಿಗಳು ಅಂಕಪಟ್ಟಿ ಶುಲ್ಕ ರೂ. 200/-ನ್ನು ಪಾವತಿಸಬೇಕು.

ಆ. ರೂ. 2.5 ಲಕ್ಷಗಳ ಆದಾಯಕ್ಕಿಂತ ಮೇಲ್ಪಟ್ಟ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು.

ಇ. **ವಿನಾಯಿತಿ ಹೊಂದಿರುವ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಅವರುಗಳಿಗೆ ಸರ್ಕಾರದಿಂದ ಮಂಜೂರಾಗುವ ವಿದ್ಯಾರ್ಥಿ ವೇತನದಿಂದ ಕಟಾಯಿಸಿ ಆಯಾ ಕಾಲೇಜುಗಳ ಪ್ರಾಂಶುಪಾಲರು ವಿಶ್ವವಿದ್ಯಾಲಯಕ್ಕೆ ಜಮಾ ಮಾಡಬೇಕು.** ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸದೇ ಇರುವ ವಿದ್ಯಾರ್ಥಿಗಳು / ವಿದ್ಯಾರ್ಥಿ ವೇತನ ಮಂಜೂರಾಗದ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು.

ಪ್ರವರ್ಗ-1ಕ್ಕೆ 2.5ಲಕ್ಷ ಹಾಗೂ ರೂ. 1 ಲಕ್ಷ ಅಥವಾ ಇದಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯವನ್ನು ಹೊಂದಿರುವ 2ಎ, 2ಬಿ, 3ಎ, 3ಬಿ ಹಾಗೂ ಇತರೆ Freshers ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ಆದರೆ, ವಿದ್ಯಾರ್ಥಿಗಳ ಅರ್ಹತೆ ಮತ್ತು ಮೆರಿಟ್ ಆಧರಿಸಿ ಸರ್ಕಾರದ ಅನುದಾನದ ಲಭ್ಯತೆಗೆ ಒಳಪಟ್ಟು ಶುಲ್ಕ ಮರುಭರಿಕೆ ಮೊತ್ತವನ್ನು ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಇಲಾಖೆಯಿಂದ ನೇರವಾಗಿ ಆಯಾ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಎನ್.ಇ.ಎಫ್.ಟಿ ವ್ಯವಸ್ಥೆ ಮೂಲಕ ಜಮಾ ಮಾಡಲಾಗುವುದೆಂದು ಸರ್ಕಾರದ ಆದೇಶ ಸಂಖ್ಯೆ: ಸ.ಕ.ಇ./201/ಬಿ.ಎಂ.ಎಸ್/2011 ಬೆಂಗಳೂರು ದಿನಾಂಕ: 23-06-2012ರಲ್ಲಿ ತಿಳಿಸಿರುತ್ತಾರೆ.

**ವಿಶೇಷ ಸೂಚನೆ: ಪರಿಶಿಷ್ಟಜಾತಿ:ಪರಿಶಿಷ್ಟಪಂಗಡ ಹಾಗೂ ಮೇಲ್ಕಂಡ ಮೀಸಲಾತಿಗೆ ಒಳಪಡುವ ವರ್ಗಗಳ ಮರುಯತ್ನದ (Repeaters) ವಿದ್ಯಾರ್ಥಿಗಳಿಗೆ ಹಾಗೂ ದಂಡ ಶುಲ್ಕದೊಂದಿಗೆ ಪರೀಕ್ಷಾ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಯಾವುದೇ ಶುಲ್ಕ ವಿನಾಯ್ತಿ ಇರುವುದಿಲ್ಲ.**

......3

ಶುಲ್ಕ ವಿನಾಯಿತಿ ಬಯಸುವ ಎಲ್ಲಾ ವಿದ್ಯಾರ್ಥಿಗಳು ಸಕ್ಷಮ ಅಧಿಕಾರಿಗಳಿಂದ ಪಡೆದ ಆದಾಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಕಾಲೇಜಿಗೆ ಒಪ್ಪಿಸಬೇಕು.

3. ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಮರುಮೌಲ್ಯಮಾಪನದ ಫಲಿತಾಂಶ ಪ್ರಕಟಗೊಳ್ಳದೇ ಇದ್ದ ಸಂದರ್ಭ/ತಾಂತ್ರಿಕ ತೊಂದರೆ ಇದ್ದಾಗೂ ಕೂಡಾ ನಿಗದಿತ ಸಮಯದಲ್ಲಿ ಪರೀಕ್ಷಾ ಶುಲ್ಕ ಪಾವತಿಸಬೇಕು. ಮರುಮೌಲ್ಯಮಾಪನ/ಮರು ಸಂಕಲನಕ್ಕೆ ಅರ್ಜಿ ಸಲ್ಲಿಸುವ ಮುನ್ನ ವಿಶ್ವವಿದ್ಯಾಲಯದ ನಿಯಮಾವಳಿಯನ್ನು ಕೂಲಂಕಶವಾಗಿ ಮನದಟ್ಟು ಮಾಡಿಕೊಳ್ಳಲು ಸೂಚಿಸಿದೆ.

## ಪ್ರಾಚಾರ್ಯರಿಗೆ ಸೂಚನೆಗಳು

1. ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಿ ಸಲ್ಲಿಸಿದ ಚಲನ್‌ನ್ನು ಪರಿಶೀಲಿಸಿ ಕೊನೆ ದಿನಾಂಕದಿಂದ ಎರಡು ದಿನದೊಳಗಾಗಿ ಪ್ರಾಂಶುಪಾಲರ ಮೇಲುಸಹಿಯೊಂದಿಗೆ ಚಲನ್ ಪ್ರತಿ ಹಾಗೂ ಇತರೆ ದಾಖಲೆಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು. ನಂತರ ಕಳುಹಿಸುವ ಅರ್ಜಿಗಳನ್ನು ಮಾನ್ಯಮಾಡುವುದಿಲ್ಲ.
2. **ಕುಲಸಚಿವ(ಆಡಳಿತ)/ಶೈಕ್ಷಣಿಕ ವಿಭಾಗದಿಂದ ಪ್ರವೇಶಾತಿ ಅನುಮೋದನೆಯಾಗದೇ ಹಾಗೂ ಕಡಿಮೆ ಹಾಜರಾತಿ ಇರುವ ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಜಿಗಳನ್ನು ಸಲ್ಲಿಸಲು ಅನರ್ಹರಾಗಿರುತ್ತಾರೆ.** ಪ್ರವೇಶಾವಕಾಶವು ಅಮಾನ್ಯವಾಗಿರುವ ಅಥವಾ ವಿಶ್ವವಿದ್ಯಾಲಯದಿಂದ ಪ್ರವೇಶವು ಅನುಮೋದಿತವಾಗಿಲ್ಲದ ಅಥವಾ ನಿರ್ದಿಷ್ಟ ಪಡಿಸಲಾದ ವಿದ್ಯಾರ್ಥಿಗಳ ಸಂಖ್ಯೆಗಿಂತ ಹೆಚ್ಚುವರಿಯಾಗಿ ಕಾಲೇಜಿಗೆ ಅಥವಾ ವ್ಯಾಸಂಗಕ್ಕೆ ಪ್ರವೇಶ ಪಡೆದಿರುವ ಯಾವೊಬ್ಬ ವಿದ್ಯಾರ್ಥಿಯೂ, ಕಾಲೇಜು ಅಥವಾ ವಿಶ್ವವಿದ್ಯಾಲಯವು ನಡೆಸುವ ಪರೀಕ್ಷೆಗೆ ಹಾಜರಾಗಲು ಅರ್ಹರಾಗಿರುವುದಿಲ್ಲ. ಅಲ್ಲದೆ ಆಯಾ ಕೋರ್ಸಿನ ನಿಯಮದ ಪ್ರಕಾರ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಲ್ಲದ ವಿದ್ಯಾರ್ಥಿಗಳು ಅರ್ಜಿಗಳನ್ನು ಸಲ್ಲಿಸುವಂತಿಲ್ಲ.
3. ಹಾಜರಾತಿ ಕೊರತೆ ಇರುವಂತಹ ಹಾಗೂ ಪ್ರವೇಶಾನುಮೋದನೆಯಾಗದ ವಿದ್ಯಾರ್ಥಿಗಳ ಪಟ್ಟಿಯನ್ನು ಪರೀಕ್ಷೆಗಳು ಆರಂಭವಾಗುವ 15ದಿನ ಮುಂಚಿತವಾಗಿ ವಿಶ್ವವಿದ್ಯಾಲಯಕ್ಕೆ ತಪ್ಪದೇ ಸಲ್ಲಿಸುವುದು. ಒಂದು ವೇಳೆ ಹಾಜರಾತಿ ಕೊರತೆ ಹಾಗೂ ಪ್ರವೇಶಾನುಮೋದನೆಯಾಗದೇ ಇರುವ ವಿದ್ಯಾರ್ಥಿಗಳು ಮುಂದಿನ ಸೆಮಿಸ್ಟರ್‌ಗೆ ಅರ್ಹತೆಯಿಲ್ಲದೆ ಪರೀಕ್ಷಾ ಅರ್ಜಿ ಸಲ್ಲಿಸಿದ್ದಲ್ಲಿ/ಪರೀಕ್ಷೆ ತೆಗೆದುಕೊಂಡಲ್ಲಿ ಮುಂದಿನ ಎಲ್ಲಾ ತರಹದ ತೊಂದರೆಗಳಿಗೆ ಕಾಲೇಜಿನ ಪ್ರಾಂಶುಪಾಲರೆ ನೇರ ಜವಾಬ್ದಾರಾಗಿರುತ್ತಾರೆ.
4. ರೂ. 2.5 ಲಕ್ಷ ಅಥವಾ ಇದಕ್ಕಿಂತ ಕಡಿಮೆ ಕುಟುಂಬದ ವಾರ್ಷಿಕ ಆದಾಯವನ್ನು ಹೊಂದಿರುವ ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದ Freshers ವಿದ್ಯಾರ್ಥಿಗಳಿಗೆ ಮಾತ್ರ ನಿಯಮಾನುಸಾರ ಶುಲ್ಕ ವಿನಾಯಿತಿ ಇರುತ್ತದೆ. ಆದರೆ ಅಂತಹ ಅಭ್ಯರ್ಥಿಗಳು ಅಂಕಪಟ್ಟಿ ಶುಲ್ಕ ರೂ. 200/–ನ್ನು ಪಾವತಿಸಬೇಕು.
5. ರೂ. 2.5 ಲಕ್ಷಗಳ ಆದಾಯಕ್ಕಿಂತ ಮೇಲ್ಪಟ್ಟ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳು ಪೂರ್ಣ ಪರೀಕ್ಷಾ ಶುಲ್ಕ ಪಾವತಿಸಬೇಕು. ಮರುಯತ್ನದ (Repeaters) ಮತ್ತು ದಂಡ ಶುಲ್ಕದೊಂದಿಗೆ ಪರೀಕ್ಷಾ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಯಾವುದೇ ಶುಲ್ಕ ವಿನಾಯಿತಿ ಇರುವುದಿಲ್ಲ.
6. **ವಿನಾಯಿತಿ ಹೊಂದಿರುವ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಅವರುಗಳಿಗೆ ಮಂಜೂರಾಗುವ ವಿದ್ಯಾರ್ಥಿ ವೇತನದಿಂದ ಕಟಾಯಿಸಿ ಆಯಾ ಕಾಲೇಜುಗಳ ಪ್ರಾಂಶುಪಾಲರು ವಿಶ್ವವಿದ್ಯಾಲಯದ ಶುಲ್ಕ ಮತ್ತು ಸಂಭಾವನೆ ಖಾತೆ ಸಂಖ್ಯೆ– 54023036246 ಜಮಾ ಮಾಡಬೇಕು. ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸದೇ ಇರುವ ವಿದ್ಯಾರ್ಥಿಗಳಿಂದ ಪೂರ್ಣ ಪರೀಕ್ಷಾ ಶುಲ್ಕ ವಸೂಲು ಮಾಡಿ ಮಾಹಿತಿಯನ್ನು (Hard Copy)ಯಲ್ಲಿ ಪರೀಕ್ಷಾ ವಿಭಾಗದ ಲೆಕ್ಕಶಾಖೆಗೆ ಸಲ್ಲಿಸುವುದು.(ಹೆಚ್ಚಿನ ಮಾಹಿತಿಗೆ 6361529618 ಸಂಪರ್ಕಿಸಬಹುದು.)**
7. **ಪ್ರಾಯೋಗಿಕ ಪರೀಕ್ಷೆಗೆ ಅಗತ್ಯವಾದ ಉತ್ತರ ಪತ್ರಿಕೆ / ಲೇಖನ ಸಾಮಾಗ್ರಿ ಹಾಗೂ ಮುದ್ರಿತ ನಮೂನೆಗಳಿಗೆ ಬೇಡಿಕೆಪಟ್ಟಿಗಳನ್ನು ದಿನಾಂಕ: 15–03–2021ರೊಳಗಾಗಿ ತಲುಪಿಸಲು ಸೂಚಿಸಿದೆ.**

.....4

8. ಸೈದ್ಧಾಂತಿಕ ಪರೀಕ್ಷೆ ನಡೆಸಲು ಬೇಕಾದ ಉತ್ತರ ಪತ್ರಿಕೆ ಮುದ್ರಿತ ನಮೂನೆಗಳು ಹಾಗೂ ಲೇಖನ ಸಾಮಾಗ್ರಿಗಳ ಬೇಡಿಕೆ ಪಟ್ಟಿಗಳನ್ನು ದಿನಾಂಕ: 28-02-2021ರೊಳಗಾಗಿ ಶ್ರೀ ಸುಬ್ರಮಣ್ಯ.ಹೆಚ್.ಎನ್. ಶಾಖಾಧಿಕಾರಿಗಳು, ಪರೀಕ್ಷಾ ವಿಭಾಗ ಇವರಿಗೆ ತಲುಪಿಸಲು ಸೂಚಿಸಿದೆ. (ಹೆಚ್ಚಿನ ಮಾಹಿತಿಗೆ 6361529618 ಸಂಪರ್ಕಿಸಬಹುದು.)

9. ಪ್ರಶ್ನೆ ಪತ್ರಿಕೆಗಳ ಬೇಡಿಕೆ ಪಟ್ಟಿಯನ್ನು **oasis.logisys.org/kus**ನಲ್ಲಿ ದಿನಾಂಕ:01-03-2021ರಂದು ಪ್ರಕಟಿಸಲಾಗುವುದು, ಸದರಿ ಪ್ರಶ್ನೆಪತ್ರಿಕೆ ಬೇಡಿಕೆ ಪಟ್ಟಿಯನ್ನು ಪರಿಶೀಲಿಸಿ, ದಿನಾಂಕ:03-03-2021ರೊಳಗೆ ಸರಿ ಇದೆ/ಇಲ್ಲ ಎಂದು ಡಾ.ಬಿ.ಜೆ.ಗಿರೀಶ್., ಉಪಕುಲಸಚಿವ (ಪರೀಕ್ಷಾಂಗ)(ದೂರವಾಣಿ ಸಂಖ್ಯೆ: 9741148002, ಅಥವಾ 9481877505.) ಇವರಿಗೆ ತಿಳಿಸಲು ಸೂಚಿಸಿದೆ.

10. ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ವಿದ್ಯಾರ್ಥಿಗಳ ಗಮನಕ್ಕೆ ತಂದು, ವಿದ್ಯಾರ್ಥಿಗಳ ಸಹಿ ಪಡೆದು, ನಿಗದಿತ ಸಮಯದೊಳಗೆ ಆನ್‌ಲೈನ್ ಮೂಲಕ ನಮೂದಿಸಿ ನಂತರ Freeze ಮಾಡಬೇಕು. ನಂತರದ ಮನವಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. (ಹೆಚ್ಚಿನ ಮಾಹಿತಿಗೆ 7022255745 ಸಂಪರ್ಕಿಸಬಹುದು.)

11. ವಿಶ್ವವಿದ್ಯಾಲಯವು ಆಂತರಿಕ ಕಿರುಪರೀಕ್ಷೆಯ ಉತ್ತರ ಪತ್ರಿಕೆ (ಬ್ಲೂ ಬುಕ್)ಗಳನ್ನು ಹಿಂಪಡೆಯುವುದರಿಂದ ಸೈದ್ಧಾಂತಿಕ ಪರೀಕ್ಷೆ ಪ್ರಾರಂಭಕ್ಕೆ ಮುಂಚೆ ಆಂತರಿಕ ಅಂಕಗಳಿಗೆ ಸಂಬಂಧಿಸಿದಂತೆ ಯಾವುದೇ ತೊಂದರೆಗಳಿದ್ದಲ್ಲಿ ಅದನ್ನು ಬಗೆಹರಿಸಿಕೊಳ್ಳಬೇಕು. ತದನಂತರ ಬರುವಂತಹ ಆಂತರಿಕ ಅಂಕಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. (ಹೆಚ್ಚಿನ ಮಾಹಿತಿಗೆ 7022255745 ಸಂಪರ್ಕಿಸಬಹುದು.)

12. ಆಂತರಿಕ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ತಮ್ಮ ಕಾಲೇಜಿನಲ್ಲಿಯೇ ಆರು ತಿಂಗಳ ಕಾಲ ಸಂರಕ್ಷಿಸಿಟ್ಟುಕೊಂಡು ನಂತರ ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಡುವುದು.

13. ಯಾವುದೇ ವಿದ್ಯಾರ್ಥಿಯ ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ ನಮೂದಿಸದೇ ಬಿಟ್ಟುಹೋದಲ್ಲಿ ಯಾವುದೇ ಕಾರಣಕ್ಕೂ ಹಾರ್ಡ್‌ಕಾಪಿಯನ್ನು ನಂತರ ಕಾಲೇಜಿನಿಂದ ಕಳುಹಿಸಿಕೊಟ್ಟಲ್ಲಿ ಅದನ್ನು ಪರಿಗಣಿಸಲಾಗುವುದಿಲ್ಲ ಅಂತಹ ಮನವಿಗಳನ್ನು ತಿರಸ್ಕರಿಸಲಾಗುವುದು. (ಹೆಚ್ಚಿನ ಮಾಹಿತಿಗೆ 7022255745 ಸಂಪರ್ಕಿಸಬಹುದು.)

***:ವಿಶೇಷ ಸೂಚನೆ:***

ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆ ಹಾಗೂ ಯು.ಜಿ.ಸಿ.ಯ ಆದೇಶದಂತೆ ವಿದ್ಯಾರ್ಥಿಗಳ ಎಲ್ಲಾ ಶೈಕ್ಷಣಿಕ ದಾಖಲೆಗಳನ್ನು National Academic Depository (NAD)ಗೆ ದಾಖಲಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಎಲ್ಲಾ ವಿದ್ಯಾರ್ಥಿಗಳು NADಗೆ ನೋಂದಣಿ ಮಾಡಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ನೋಂದಣಿ ಮಾಡಿಕೊಂಡ ವಿದ್ಯಾರ್ಥಿಗಳ ಶೈಕ್ಷಣಿಕ ದಾಖಲೆಗಳನ್ನು ಭವಿಷ್ಯದಲ್ಲಿ ಯಾವ ಸಮಯದಲ್ಲಿಯೂ ಕೂಡ NAD ವೆಬ್‌ಸೈಟ್‌ನಲ್ಲಿ ಸ್ವತಃ ಪಡೆಯಲು ಹಾಗೂ ಪರಿಶೀಲನೆಗೆ ಅವಕಾಶ ನೀಡಲಾಗುವುದು. ಪರೀಕ್ಷಾ ಶುಲ್ಕವನ್ನು ಪಾವತಿಸುವಾಗ ಅಥವಾ ಪರೀಕ್ಷಾ ಅರ್ಜಿಯಲ್ಲಿ ನಮೂದಾದ ಮೊಬೈಲ್ ಸಂಖ್ಯೆ ಹಾಗೂ ಈಮೇಲ್‌ಗಳಿಗೆ NAD ನೋಂದಣಿ ಪ್ರಕ್ರಿಯೆಗೆ ಅಗತ್ಯವಾದ Linkನ್ನು ಕಳುಹಿಸಲಾಗುತ್ತದೆ. NAD ನೋಂದಣಿ ಸಂಖ್ಯೆ ಪಡೆದಲ್ಲಿ ಮಾತ್ರ ಪ್ರವೇಶ ಪತ್ರವನ್ನು ನೀಡಲಾಗುವುದು.

(ಪ್ರೊ. ಪಿ.ಕಣ್ಣನ್)
ಕುಲಸಚಿವರು(ಪರೀಕ್ಷಾಂಗ)
ಕುಲಸಚಿವ (ಪರೀಕ್ಷಾಂಗ)
ಕುವೆಂಪು ವಿಶ್ವವಿದ್ಯಾನಿಲಯ,
ಜ್ಞಾನಸಹ್ಯಾದ್ರಿ,
ಶಂಕರಘಟ್ಟ - 577 451.

ಗೆ,
ಕುವೆಂಪು ವಿಶ್ವವಿದ್ಯಾನಿಲಯದ ಶಿವಮೊಗ್ಗ / ಚಿಕ್ಕಮಗಳೂರು ಜಿಲ್ಲೆಯ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

....5

ಪ್ರತಿ:

1. ಆಪ್ತಶಾಖೆ, ಮಾನ್ಯಕುಲಪತಿ, ಕುಲಸಚಿವ(ಆಡಳಿತ), ಕುಲಸಚಿವ (ಪರೀಕ್ಷಾಂಗ) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
2. ನಿರ್ದೇಶಕರು, ಪಿ.ಎಂ.ಇ ಮಂಡಳಿ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
3. ಉಪಕುಲಸಚಿವರು: ಸಹಾಯಕ ಕುಲಸಚಿವರು, ಪರೀಕ್ಷಾಂಗ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
4. ಅಧೀಕ್ಷಕರು, ಪರೀಕ್ಷಾ ವಿಭಾಗ ಹಾಗೂ ಕಂಪ್ಯೂಟರ್ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
5. ನಿರ್ದೇಶಕರು, UCCF ಕಛೇರಿ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
6. ಎಲ್ಲಾ ವಿಷಯ ನಿರ್ವಾಹಕರು, ಪರೀಕ್ಷಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7. ಕಛೇರಿ ಪ್ರತಿ.

ವೆಬ್‌ಸೈಟ್: www.kuvempu.ac.in
ದೂರವಾಣಿ:08282- 256166,7022254997 ಇ-ಮೇಲ್: regexamku@gmail.com

# ಕುವೆಂಪು ವಿಶ್ವವಿದ್ಯಾಲಯ

ಕುಲಸಚಿವರು(ಮೌಲ್ಯಮಾಪನ)ರವರ ಕಛೇರಿ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577 451.
ಶಿವಮೊಗ್ಗ ಜಿಲ್ಲೆ. ಕರ್ನಾಟಕ.

Re-Accredited by NAAC with 'A' Grade, Ranked 73rd place in NIRF-2019 & 45th place at National Level in SCIMAGO Rankings

## ಆದೇಶ

ವಿಷಯ:-ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ನಡೆಸಲಾಗದ ಸ್ನಾತಕ ಪದವಿಗೆ ಪಾವತಿಸಿರುವ ಪರೀಕ್ಷಾ ಶುಲ್ಕದಲ್ಲಿ ಶೇ.50ರಷ್ಟು ರಿಯಾಯಿತಿ ನೀಡುವ ಬಗ್ಗೆ.

ಉಲ್ಲೇಖ:-01.ಸರ್ಕಾರದ ಆದೇಶ ಸಂಖ್ಯೆ:ED/197/UNE/2020,dt:14.08.2020.
02. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:06.02.2021.

-o-o-

**ಪ್ರಸ್ತಾವನೆ:**

ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಸರ್ಕಾರದ ಉಲ್ಲೇಖ(01)ರ ಆದೇಶದನ್ವಯ ಎಲ್ಲಾ ಸ್ನಾತಕ ಪದವಿಯ ಅಂತಿಮ ಸೆಮಿಸ್ಟರ್ (ರೆಗ್ಯುಲರ್ ವಿದ್ಯಾರ್ಥಿಗಳಿಗೆ ಬ್ಯಾಕ್‌ಲಾಗ್ ಸೆಮಿಸ್ಟರ್ ವಿಷಯಗಳನ್ನು ಒಳಗೊಂಡಂತೆ) ಪರೀಕ್ಷೆಗಳನ್ನು ನಡೆಸಿ ಈಗಾಗಲೇ ಫಲಿತಾಂಶ ಪ್ರಕಟಿಸಲಾಗಿದೆ.

ಕೋವಿಡ್-19ರ ಹಿನ್ನೆಲೆಯಲ್ಲಿ ಸ್ನಾತಕ ಪದವಿಯ 2ಮತ್ತು 4ನೇ ಸೆಮಿಸ್ಟರ್(ರೆಗ್ಯುಲರ್) ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸಲಾಗಿರುವುದಿಲ್ಲ. ಸದರಿ ವಿದ್ಯಾರ್ಥಿಗಳಿಗೆ ಆರ್ಥಿಕ ಹೊರೆಯಾಗಬಾರದೆಂಬ ಉದ್ದೇಶದಿಂದ ಸರ್ಕಾರದ ಉಲ್ಲೇಖಿತ(01)ರ ಆದೇಶ ಹಾಗೂ ಉಲ್ಲೇಖ(02)ರ ಮಾನ್ಯ ಕುಲಪತಿಗಳ ಆದೇಶದಂತೆ, ವಿಶ್ವವಿದ್ಯಾಲಯದಲ್ಲಿ ಕೋವಿಡ್-19ರಿಂದಾಗಿ ನಡೆಸಲಾಗದ ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಪಾವತಿಸಿದ ಶುಲ್ಕದಲ್ಲಿ (ಅಂಕಪಟ್ಟಿ ಶುಲ್ಕ ಹೊರತುಪಡಿಸಿ) ಶೇ.50ರಷ್ಟು ಮೊತ್ತಕ್ಕೆ ರಿಯಾಯಿತಿ ನೀಡಲು ಈ ಕೆಳಕಂಡ ಆದೇಶ.

**ಆದೇಶ: ಸಂಖ್ಯೆ:ಕುವಿ:ಪವಿ:ಯುಜಿ-2/13/8451/2020-21. ದಿನಾಂಕ:08.02.2021.**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಸರ್ಕಾರದ ಆದೇಶ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆಯನುಸಾರ ಸ್ನಾತಕ ಪದವಿ ವಿದ್ಯಾರ್ಥಿಗಳು 2019-20ರಲ್ಲಿ ಪಾವತಿಸಿರುವ ಒಟ್ಟು ಪರೀಕ್ಷಾ ಶುಲ್ಕದ (ಅಂಕಪಟ್ಟಿ ಶುಲ್ಕ ಹೊರತುಪಡಿಸಿ) ಶೇ.50ರಷ್ಟು ಮೊತ್ತಕ್ಕೆ ರಿಯಾಯಿತಿ ನೀಡಿ ಬಾಕಿ ಉಳಿಯುವ ಶೇ.50ರಷ್ಟು ಶುಲ್ಕದ ಮೊತ್ತವನ್ನು ಮುಂದಿನ ಸೆಮಿಸ್ಟರ್ ಪರೀಕ್ಷಾ (ಮಾರ್ಚ್-2021ರಲ್ಲಿ ನಡೆಯುವ ಪರೀಕ್ಷೆ) ಶುಲ್ಕಕ್ಕೆ ಹೊಂದಾಣಿಕೆ ಮಾಡಿಕೊಳ್ಳಲು ಆದೇಶಿಸಲಾಗಿದೆ.

ಈ ಶುಲ್ಕ ವಿನಾಯಿತಿಯನ್ನು ಈ ಒಂದು ಬಾರಿಯ ಕ್ರಮಕ್ಕಾಗಿ ಜಾರಿಗೊಳಿಸಿದೆ. ಹಾಗೂ ಈ ಶುಲ್ಕ ವಿನಾಯಿತಿಯು 2ಮತ್ತು 4ನೇ ಸೆಮಿಸ್ಟರ್‌ನಲ್ಲಿ ಪರೀಕ್ಷಾ ಶುಲ್ಕ ಪಾವತಿಸಿರುವ ರೆಗ್ಯುಲರ್ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯವಾಗುತ್ತದೆ.

ಆದೇಶದ ಮೇರೆಗೆ,

ಕುಲಸಚಿವರು(ಮೌಲ್ಯಮಾಪನ)
ಕುಲಸಚಿವ (ಪರೀಕ್ಷಾಂಗ)
ಕುವೆಂಪು ವಿಶ್ವವಿದ್ಯಾನಿಲಯ,
ಜ್ಞಾನಸಹ್ಯಾದ್ರಿ,
ಶಂಕರಘಟ್ಟ-577 451

ಗೆ,
ಕುವೆಂಪು ವಿಶ್ವವಿದ್ಯಾನಿಲಯದ ಶಿವಮೊಗ್ಗ / ಚಿಕ್ಕಮಗಳೂರು ಜಿಲ್ಲೆಯ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

......2

<u>ಪ್ರತಿ:</u>

1. ಆಪ್ತಶಾಖೆ, ಮಾನ್ಯಕುಲಪತಿ, ಕುಲಸಚಿವ(ಆಡಳಿತ), ಕುಲಸಚಿವ (ಪರೀಕ್ಷಾಂಗ) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
2. ನಿರ್ದೇಶಕರು, ಪಿ.ಎಂ.ಇ ಮಂಡಳಿ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
3. ಉಪಕುಲಸಚಿವರು: ಸಹಾಯಕ ಕುಲಸಚಿವರು, ಪರೀಕ್ಷಾಂಗ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
4. ಶಾಖಾಧಿಕಾರಿಗಳು, ಪರೀಕ್ಷಾ ವಿಭಾಗ ಹಾಗೂ ಕಂಪ್ಯೂಟರ್ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
5. ನಿರ್ದೇಶಕರು, UCCF ಕಛೇರಿ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
6. ಎಲ್ಲಾ ವಿಷಯ ನಿರ್ವಾಹಕರು, ಪರೀಕ್ಷಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7. ಕಛೇರಿ ಪ್ರತಿ.

ವೆಬ್‌ಸೈಟ್: www.kuvempu.ac.in
ದೂರವಾಣಿ:08282- 256166,7022254997
ಇ-ಮೇಲ್: regexamku@gmail.com

# ಕುವೆಂಪು ವಿಶ್ವವಿದ್ಯಾಲಯ

ಕುಲಸಚಿವರು(ಮೌಲ್ಯಮಾಪನ)ರವರ ಕಛೇರಿ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577 451.
ಶಿವಮೊಗ್ಗ ಜಿಲ್ಲೆ. ಕರ್ನಾಟಕ.

Re-Accredited by NAAC with 'A' Grade, Ranked 73rd place in NIRF-2019 & 45th place at National Level in SCIMAGO Rankings

ಸಂಖ್ಯೆ:ಕುವಿ:ಪವಿ:ಯುಜಿ-2/02/020-21/8551 ದಿನಾಂಕ:11.02.2021.

**-:ಸುತ್ತೋಲೆ:-**

ವಿಷಯ;-ಸೆಪ್ಟಂಬರ್-2020ರ ಸ್ನಾತಕ ಪದವಿ ಫಲಿತಾಂಶಕ್ಕೆ ಸಂಬಂಧಪಟ್ಟ ಆಂತರಿಕ ಅಂಕಗಳ ಸೇರ್ಪಡೆಗೊಳಿಸುವ ಬಗ್ಗೆ.

ಉಲ್ಲೇಖ:- ಈ ಕಛೇರಿ ಸುತ್ತೋಲೆ ಸಂಖ್ಯೆ:ಕುವಿ:ಪವಿ;ಯುಜಿ-2/161/2019-20, ದಿನಾಂಕ:12.05.2020.

-o-o-

ದೇಶಾದ್ಯಾಂತ ವ್ಯಾಪಿಸಿರುವ ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಆಂತರಿಕ ಅಂಕಗಳನ್ನು ದಿನಾಂಕ:20.05.2020ರೊಳಗೆ ಆನ್‌ಲೈನ್‌ನಲ್ಲಿ ನಮೂದಿಸುವಂತೆ ಉಲ್ಲೇಖಿತ ಪತ್ರದಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಅದಾಗ್ಯೂ ಸಹ ಸೆಪ್ಟಂಬರ್-2020ರ ಸ್ನಾತಕ ಪದವಿ ಪರೀಕ್ಷಾ ಪೂರ್ವದಲ್ಲಿ ಕೆಲವು ಕಾಲೇಜಿನಿಂದ ಆಂತರಿಕ ಅಂಕಗಳು ಬಿಟ್ಟು ಹೋಗಿರುವುದರಿಂದ ಹಾರ್ಡ್‌ಕಾಪಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದು, ಅಂತಹ ಆಂತರಿಕ ಅಂಕಗಳನ್ನು ಸಹ ನಮೂದಿಸಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಠಿಯಿಂದ ಈಗಾಗಲೇ ಪರೀಕ್ಷಾ ಫಲಿತಾಂಶ ಪ್ರಕಟಗೊಂಡು ಅಂಕಪಟ್ಟಿಗಳ ಮುದ್ರಣ ಕಾರ್ಯದ ಹಂತದಲ್ಲಿರುವಾಗ ಪುನಃ ಆಂತರಿಕ ಅಂಕಗಳನ್ನು ಸೇರ್ಪಡೆಗೊಳಿಸುವಂತೆ ಕೆಲವು ಕಾಲೇಜುಗಳಿಂದ ಮನವಿಗಳು ವಿಶ್ವವಿದ್ಯಾಲಯಕ್ಕೆ ಬರುತ್ತಿವೆ. ಇಂತಹ ಸಮಯದಲ್ಲಿ ಆಂತರಿಕ ಅಂಕಗಳನ್ನು ಸೇರ್ಪಡೆಗೊಳಿಸಲು ಅವಕಾಶವಿರುವುದಿಲ್ಲ. ಈ ಹಿನ್ನೆಲೆಯಲ್ಲಿ **ಸೆಪ್ಟಂಬರ್-2020**ರ ಪರೀಕ್ಷೆಗೆ ಸಂಬಂಧಪಟ್ಟ ಇಂತಹ ಮನವಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬಾರದಾಗಿ ಸೂಚಿಸಲಾಗಿದೆ.

(ಪ್ರೊ: ಪಿ.ಕಣ್ಣನ್)
ಕುಲಸಚಿವರು(ಪರೀಕ್ಷಾಂಗ)
ಕುಲಸಚಿವ (ಪರೀಕ್ಷಾಂಗ)
ಕುವೆಂಪು ವಿಶ್ವವಿದ್ಯಾನಿಲಯ.
ಜ್ಞಾನಸಹ್ಯಾದ್ರಿ,
ಶಂಕರಘಟ್ಟ - 577 451.

11/2/21

ಗೆ,

ಕುವೆಂಪು ವಿಶ್ವವಿದ್ಯಾಲಯದ ಶಿವಮೊಗ್ಗ / ಚಿಕ್ಕಮಗಳೂರು ಜಿಲ್ಲೆಯ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ